ಸ್ಥಾಪನೆ : 1966
ನೋಂದಣಿ ಸಂಖ್ಯೆ : ಡಿ.ವೈ.ಆರ್.443

ಪ್ರಧಾನ ಕಛೇರಿ : 080–23151204, 23152073
ಬಸವೇಶ್ವರನಗರ ಶಾಖೆ : 080–23231238, 23232587
ಅನ್ನಪೂರ್ಣೇಶ್ವರಿನಗರ ಶಾಖೆ : 080–23183734
e-mail : contact@rcbl.co
Website: www.rcbl.co

# ದಿ ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ನಂ–741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**

## 55ನೇ ಸರ್ವಸದಸ್ಯರ ಸಭೆಯ ಸೂಚನಾ ಪತ್ರ

**2021–22ನೇ ಸಾಲಿನ 55ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 11/09/2022 ರಂದು ಭಾನುವಾರ ಬೆಳಿಗ್ಗೆ 09–30 ಘಂಟೆಗೆ "ಶ್ರೀ ರಾಜರಾಜೇಶ್ವರಿ ಕಲ್ಯಾಣ ಮಂಟಪ" ಡಾ॥ ರಾಜ್‌ಕುಮಾರ್ ರಸ್ತೆ, 2ನೇ ವಿಭಾಗ, ರಾಜಾಜಿನಗರ, ಬೆಂಗಳೂರು–560010 ಇಲ್ಲಿ ನಡೆಸಲಾಗುವುದೆಂದು ತಿಳಿಸಿ ದಿನಾಂಕ 19/08/2022 ರಂದು, ಎಲ್ಲಾ ಸದಸ್ಯರುಗಳಿಗೆ ವೈಯಕ್ತಿಕ ನೋಟಿಸು ಕಳಿಸಲಾಗಿತ್ತು. ಪ್ರಸ್ತುತ ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ : ಸಇ 69 ಸಿಎಲ್‌ಎಮ್ 2022(ಇ) ಬೆಂಗಳೂರು, ದಿನಾಂಕ 25/08/2022ರ ಆದೇಶದಂತೆ Video Conference / Virtual Meeting ಮೂಲಕ ನಡೆಸಲು ಅನುಮತಿಸಿರುವುದನ್ನು ಪರಿಗಣಿಸಿದ ಬ್ಯಾಂಕಿನ ಆಡಳಿತ ಮಂಡಳಿಯು ದಿನಾಂಕ 31/03/2022ಕ್ಕೆ ಮುಕ್ತಾಯಗೊಂಡ ಬ್ಯಾಂಕಿನ (2021-22ನೇ ಸಾಲಿನ) 55ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 11/09/2022 ರಂದು ಭಾನುವಾರ ಬೆಳಿಗ್ಗೆ 10–00 ಘಂಟೆಗೆ ಬ್ಯಾಂಕಿನ ಗೌರವ ಅಧ್ಯಕ್ಷರಾದ ಶ್ರೀ. ಕೆ.ಎಲ್. ತಿಮ್ಮಪ್ಪ ಇವರ ಅಧ್ಯಕ್ಷತೆಯಲ್ಲಿ Video Conference / Virtual Meeting ಮೂಲಕ ನಡೆಸಲಾಗುವುದು. ಸದಸ್ಯರು ಅನುವು ಮಾಡಿಕೊಂಡು ಲಿಂಕ್ https://viewnow.in/rcbl.in2022/ ಮುಖಾಂತರ ಸಭೆಗೆ ಸಕಾಲಕ್ಕೆ ಸೇರಿಕೊಳ್ಳಲು ಕೋರಲಾಗಿದೆ.**

### ಕಾರ್ಯಕ್ರಮಗಳು

1. ಪ್ರಾರ್ಥನೆ
2. ಅಧ್ಯಕ್ಷರಿಂದ ಸ್ವಾಗತ ಭಾಷಣ
3. ಚಿರಸ್ಮರಣೆ.
4. ಸರ್ವಸದಸ್ಯರ ಸಭೆಯ ಮೀಟಿಂಗ್ ನೋಟಿಸನ್ನು ಓದುವುದು.
5. 2020–21ನೇ ಸಾಲಿನ ಸರ್ವಸದಸ್ಯರ ವರ್ಚುಯಲ್ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡುವುದು.
6. 2021–22ನೇ ಸಾಲಿನ ಕಾರ್ಯಕಾರಿ ಸಮಿತಿಯ ವಾರ್ಷಿಕ ವರದಿಯ ಅಂಗೀಕಾರ
7. 2021–22ನೇ ಸಾಲಿನ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳು ಹಾಗೂ ಲೆಕ್ಕಪರಿಶೋಧನಾ ವರದಿಯ ಅಂಗೀಕಾರ.
8. 2021–22ನೇ ಸಾಲಿನ ನಿವ್ವಳ ಲಾಭದ ಹಂಚಿಕೆ.
9. 2021–22ನೇ ಸಾಲಿನ ಅಂದಾಜು ಮಾಡಿದ ವೆಚ್ಚಕ್ಕಿಂತ ಹೆಚ್ಚುವರಿಯಾದ ವೆಚ್ಚಕ್ಕೆ ಅನುಮೋದನೆ.
10. 2022–23ನೇ ಸಾಲಿನ ಅಂದಾಜು ಆಯ–ವ್ಯಯಗಳ ಅಂಗೀಕಾರ
11. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರು ಪಟ್ಟಿ ಮಾಡಿರುವ ಪೈಕಿ 2022–23ನೇ ಸಾಲಿಗೆ ಶಾಸನಬದ್ದ ಲೆಕ್ಕಪರಿಶೋಧಕರನ್ನು ನೇಮಿಸುವ ಬಗ್ಗೆ (ಆರ್.ಬಿ.ಐ ರವರ ಅನುಮತಿಗೊಳಪಟ್ಟು)
12. ಸದಸ್ಯರುಗಳಿಂದ ಬಂದ ವಿಷಯಗಳ ಪರಿಶೀಲನೆ.
13. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬೇಕಾದ ಇತರೆ ವಿಷಯಗಳು.
14. ವಂದನಾರ್ಪಣೆ

ಸ್ಥಳ : ಬೆಂಗಳೂರು
ದಿನಾಂಕ : 02/09/2022

**ಕಾರ್ಯಕಾರಿ ಮಂಡಳಿ ಆಜ್ಞೆಯ ಮೇರೆಗೆ**
**ಸಹಿ/–**
**(ಆರ್.ಗೋವಿಂದರಾಜು)**
**ಮುಖ್ಯ ಕಾರ್ಯ ನಿರ್ವಹಣಾಧಿಕಾರಿ**

## ವಿಶೇಷ ಸೂಚನೆ

1) ಸದಸ್ಯರು ವಾರ್ಷಿಕ ವರದಿ ಪುಸ್ತಕವನ್ನು ದಿನಾಂಕ 05/09/2022 ರಿಂದ ಬ್ಯಾಂಕಿನ ಕೆಲಸದ ವೇಳೆಯಲ್ಲಿ ಪಡೆಯಬಹುದು.
2) ಬ್ಯಾಂಕಿಗೆ ಬಂದು ಪಡೆಯಲು ಸಾಧ್ಯವಾಗದ ಸದಸ್ಯರು ಬ್ಯಾಂಕಿನ ವೆಬ್‌ಸೈಟ್ www.rcbl.co ನಲ್ಲಿ ಪ್ರಚುರಗೊಳಿಸಿರುವ ವಾರ್ಷಿಕ ವರದಿಯನ್ನು ಓದಬಹುದು.
3) ವಿಷಯ 12ಕ್ಕೆ ಸಂಬಂಧಿಸಿದಂತೆ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಲು ಇಚ್ಛೆಯುಳ್ಳ ಸದಸ್ಯರು ದಿನಾಂಕ 08/09/2022ರ ಒಳಗೆ ಚರ್ಚಿಸಬೇಕಾದ ವಿಷಯದ ಬಗ್ಗೆ ಲಿಖಿತ ಪತ್ರವನ್ನು ವ್ಯವಸ್ಥಾಪಕರಿಗೆ ಸಲ್ಲಿಸಬಹುದಾಗಿದೆ.
4) ಪೂರ್ವಲಿಖಿತ ಪತ್ರ ಸಲ್ಲಿಸಿದ ಸದಸ್ಯರುಗಳಿಗೆ ಮಾತ್ರ ಆಡಳಿತ ಮಂಡಳಿಯವರೊಂದಿಗೆ Virtual Meeting ನಲ್ಲಿ ಚರ್ಚಿಸಲು ಅವಕಾಶ ಕಲ್ಪಿಸಲಾಗುವುದು.
5) ಸಾಮಾನ್ಯ ಸಭೆ ನಡವಳಿಯಲ್ಲಿ ಪ್ರಶ್ನಿಸ ಬಯಸುವ ಸದಸ್ಯರು, ಅವರ ಪ್ರಶ್ನೆಗಳನ್ನು Chat Box ನಲ್ಲಿ ನಮೂದಿಸುವುದು.
6) ತಮ್ಮ ಗುರುತಿನ ಚೀಟಿಯನ್ನು ಪಡೆಯದೆ ಇರುವ ಸದಸ್ಯರು ಕೂಡಲೇ ತಮ್ಮ 2 ಪಾಸ್‌ಪೋರ್ಟ್ ಭಾವಚಿತ್ರವನ್ನು ಸಲ್ಲಿಸಿ, ಗುರುತಿನ ಚೀಟಿಯನ್ನು ಪಡೆಯುವುದು.
7) ಷೇರು ಪ್ರಮಾಣ ಪತ್ರ ಪಡೆಯದೇ ಇರುವ ಸದಸ್ಯರು ಕೂಡಲೇ ಕಛೇರಿಗೆ ಬಂದು ಪಡೆಯಲು ಕೋರಿದೆ.
8) ಸದಸ್ಯರುಗಳು ತಮ್ಮ ಖಾತೆಗಳಿಗೆ ನಾಮ ನಿರ್ದೇಶನ ಮಾಡದೇ ಇದ್ದ ಪಕ್ಷದಲ್ಲಿ ಕೂಡಲೇ ಬಂದು ನಾಮಿನೇಷನ್ ಫಾರಂ ಸಲ್ಲಿಸಲು ಸೂಚಿಸಿದೆ.
9) ಸದಸ್ಯರು ತಮ್ಮ ಇ-ಮೇಲ್ ವಿಳಾಸ ಹಾಗೂ ಮೊಬೈಲ್ ಸಂಖ್ಯೆಯನ್ನು ಕೂಡಲೇ ಬ್ಯಾಂಕಿಗೆ ನೀಡಿ ನೋಂದಾಯಿಸಿಕೊಳ್ಳತಕ್ಕದ್ದು. ಹಾಗೂ ಸದಸ್ಯರ ಮನೆ ವಿಳಾಸ, ದೂರವಾಣಿ ಮತ್ತು ಮೊಬೈಲ್ ಸಂಖ್ಯೆ ಬದಲಾವಣೆಯಾಗಿದ್ದಲ್ಲಿ ಬ್ಯಾಂಕಿಗೆ ಬಂದು ನೀಡುವುದು.
10) ನಮ್ಮ ಬ್ಯಾಂಕಿನ ತಮ್ಮ ಖಾತೆಗಳಿಗೆ ಇತ್ತೀಚಿನ ಭಾವಚಿತ್ರದೊಂದಿಗೆ ಸಂಬಂಧಪಟ್ಟ ಶಾಖೆಯನ್ನು ಸಂಪರ್ಕಿಸಿ ತಮ್ಮ ಸಹಿಯನ್ನು ನವೀಕರಿಸುವುದು ಹಾಗೂ ಕೆ.ವೈ.ಸಿ (KYC) ದಾಖಲೆಗಳ ಪ್ರತಿಗಳನ್ನು ನೀಡುವುದು.
11) ಉಳಿತಾಯ / ಚಾಲ್ತಿ / ಠೇವಣಿಖಾತೆಗಳ ವಹಿವಾಟನ್ನು ನಿರಂತರವಾಗಿ ಮಾಡದಿದ್ದ ಪಕ್ಷದಲ್ಲಿ ತಮ್ಮ ಖಾತೆಗಳನ್ನು ಆರ್.ಬಿ.ಐ ನಿಯಮದ ಪ್ರಕಾರ ಖಾತೆಗಳು ಸ್ಥಗಿತಗೊಳ್ಳುವುದು ಅಥವಾ ಡಿ.ಇ.ಎ ಫಂಡ್ (DEA Fund) ಖಾತೆಗೆ ವರ್ಗಾಯಿಸಲಾಗುವುದು.

| **Meeting Joining Process :** | Please scan below QR code for Joining for Meeting |
|---|---|
| ❖ Clink on the link https://viewnow.in/rcbl.in2022/<br>❖ Enter your Name & Membership No. & click REGISTER / JOIN LIVE button<br>❖ You will be redirected to ZOOM page<br>❖ Down-load ZOOM application & click JOIN WITH COMPUTER AUDIO<br>❖ Allow application to use camera & Mic by clicking JOIN AUDIO & CALL OVER INTERNET<br>❖ To ask question – click on "REACTIONS" & RAISE HAND option & wait for Moderator to unmute you.<br>❖ Once prompted to speak, un-mute your MIC by pressing UN-MUTE button & speak<br>❖ Click on PARTICIPANTS to view list of participants who are present in meeting.<br>❖ When the session ends, you may click the "LEAVE" button to exit meeting. | |

ಗೆ,

**ತೆರೆದ ಅಂಚೆ**

ಅಂಚೆ ಬಡವಾಡೆಯಾಗದಿದ್ದಲ್ಲಿ ಈ ಕೆಳಕಂಡ ವಿಳಾಸಕ್ಕೆ ಹಿಂತಿರುಗಿಸಿ.

ಇಂದ,

**ದಿ ರಾಜಾಜಿನಗರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್**

**ನಂ-741, 3ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು – 560010**